# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 552 |
| ಸದಸ್ಯರ ಹೆಸರು | : | ಡಾ. ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13–12–2018 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಯವರು. |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>
<table>
<tr><th>ಕ್ರ. ಸಂ.</th><th>ಪದವಿ ಪೂರ್ವ ಕಾಲೇಜಿನ ವಿಧ</th><th>ಸಂಖ್ಯೆ</th></tr>
<tr><td>1.</td><td>ಅನುದಾನಿತ</td><td>797</td></tr>
<tr><td>2.</td><td>ಅನುದಾನರಹಿತ</td><td>3194</td></tr>
<tr><td>3.</td><td>ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳು</td><td>161</td></tr>
<tr><td colspan="2">ಒಟ್ಟು</td><td>4152</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಒದಗಿಸಿದೆ.</td></tr>
<tr><td>ಆ.</td><td>ಈ ಪದವಿ ಪೂರ್ವ ಕಾಲೇಜುಗಳ ಪೈಕಿ ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗ್ರಾಮೀಣ ಮಟ್ಟದಲ್ಲಿ ನಡೆಯುತ್ತಿರುವ ಕಾಲೇಜುಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)</td><td>ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗ್ರಾಮೀಣ ಮಟ್ಟದಲ್ಲಿ ನಡೆಯುತ್ತಿರುವ ಕಾಲೇಜುಗಳ ಸಂಖ್ಯೆಯ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಿದೆ.</td></tr>
<tr><td>ಇ.</td><td>ಸರ್ಕಾರಿ ಹೊಸ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು;</td><td>ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮಂಜೂರಾತಿಗೆ ಕುರಿತಂತೆ ಈ ಕೆಳಗಿನ ಮಾನದಂಡಗಳ ಅನ್ವಯ ಪರಿಗಣಿಸಲಾಗುತ್ತಿದೆ.<br><br>1. ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶದಲ್ಲಿ ಶೈಕ್ಷಣಿಕ ವಾತಾವರಣವನ್ನು ಉತ್ತಮಪಡಿಸುವ ಉದೇಶದಿಂದ ಪ್ರತಿ 10–20 ಕಿ.ಮೀಗಳಿಗೆ ಒಂದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವುದು.<br>2. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಗಣ್ಯವ್ಯಕ್ತಿಗಳ ಕೋರಿಕೆಯ ಮೇರೆಗೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುತ್ತಿದೆ.<br>3 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಫೀಡಿಂಗ್ ಶಾಲೆಗಳು ಇಲ್ಲದಿದ್ದರೂ ಸಹ ಹತ್ತಿರದ ಸುತ್ತಮುತ್ತಲು 10–20 ಕಿ.ಮೀಗಳ ಅಂತರದಲ್ಲಿರುವ ಶಾಲೆಗಳಿಂದ ಬರುವ ಸಂಭವವಿರುತ್ತದೆ.<br>4. ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಪ್ರದೇಶಗಳ ಜನಸಂಖ್ಯೆ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವನ್ನು ಗಮನಿಸಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಗಣ್ಯವ್ಯಕ್ತಿಗಳ ಕೋರಿಕೆ ಮೇರೆಗೆ ಬೇಡಿಕೆ ಪಟ್ಟಿ ಆಧರಿಸಿ ಕೆಲವು ಸ್ಥಳಗಳಲ್ಲಿ ಖಾಸಗಿ ಪದವಿ ಪೂರ್ವ ಕಾಲೇಜುಗಳಿದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿರುವ</td></tr>
</table>

| | | |
|---|---|---|
| | | ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವುದು.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ:27-09-2018 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018ರಲ್ಲಿ ಹೊರಡಿಸಲಾದ ತಿದ್ದುಪಡಿ ನಿಯಮಗಳನ್ವಯ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು 2006ರಲ್ಲಿ ನಿಗದಿಪಡಿಸಲಾಗಿದ್ದ ಮಾನದಂಡಗಳನ್ನು ಪರಿಷ್ಕರಿಸಿ, ನಿಗದಿಪಡಿಸಲಾಗಿದೆ. ಅದರನ್ವಯ ಹೊಸ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಸಂಸ್ಥೆಯು ಈ ಕೆಳಕಂಡಂತೆ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದಾಗಿದೆ.<br>1. ನಿವೇಶನದ ವಿಸ್ತೀರ್ಣ-<br>(1) <u>ಬಿ.ಬಿ.ಎಂ.ಪಿ. ಮತ್ತು ಇತರ ಮುನ್ಸಿಪಲ್ ಕಾರ್ಪೋರೇಷನ್ ಪ್ರದೇಶಗಳಲ್ಲಿ-</u><br>(ಅ) ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ 1000ಚ.ಮೀ.<br>(ಆ) ಪ್ರೌಢ ಶಾಲೆಯೊಂದಿಗೆ ಪದವಿ ಪೂರ್ವ ಕಾಲೇಜಿಗೆ 1500ಚ.ಮೀ.<br>(ಇ)ಪ್ರಾಥಮಿಕ ಮತ್ತು ಪ್ರೌಢ ಶಾಲೆಯೊಂದಿಗೆ ಪದವಿ ಪೂರ್ವ ಕಾಲೇಜಿಗೆ 2000ಚ.ಮೀ<br>(2) <u>ಇತರ ಪ್ರದೇಶಗಳಲ್ಲಿ-</u><br>(ಅ) ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ 2000ಚ.ಮೀ.<br>(ಆ) ಪ್ರೌಢ ಶಾಲೆಯೊಂದಿಗೆ ಪದವಿ ಪೂರ್ವ ಕಾಲೇಜಿಗೆ 3000ಚ.ಮೀ.<br>(ಇ)ಪ್ರಾಥಮಿಕ ಮತ್ತು ಪ್ರೌಢ ಶಾಲೆಯೊಂದಿಗೆ ಪದವಿ ಪೂರ್ವ ಕಾಲೇಜಿಗೆ 4000ಚ.ಮೀ<br>2. ಸದರಿ ನಿವೇಶನದಲ್ಲಿ ಕಾಲೇಜು ಕಟ್ಟಡ, ಪ್ರಾಚಾರ್ಯರ ಕೊಠಡಿ ಹಾಗೂ ಗ್ರಂಥಾಲಯ ಕೊಠಡಿಗಳು, ಉಪನ್ಯಾಸಕರ ಕೊಠಡಿ, ಸಿಬ್ಬಂದಿ ಕೊಠಡಿ ಮತ್ತು ಕ್ರೀಡಾ ಕೊಠಡಿ ಇತ್ಯಾದಿಗಳು ನಿಗದಿತ ವಿಸ್ತೀರ್ಣದಲ್ಲಿ ಹೊಂದಿರಬೇಕು.<br>3. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರಬೇಕು.<br>4. ವಾಚನಾಲಯವೂ ಸೇರಿದಂತೆ, ಕನಿಷ್ಠ 1000 ಚದರಡಿ ಅಳತೆಯ ಸುಸಜ್ಜಿತ ಗ್ರಂಥಾಲಯ.<br>5. ಉಪನ್ಯಾಸ ಕೊಠಡಿಗಳು ಕನಿಷ್ಠ 450ಚ.ಅ. ಇರತಕ್ಕದ್ದು.<br>6. ವಿಜ್ಞಾನ ಸಂಯೋಜನೆ/ಪ್ರಾಯೋಗಿಕ ತರಗತಿ ಇರುವ ವಿಷಯ ಇದ್ದಲ್ಲಿ ಕನಿಷ್ಠ 800ಚ.ಅಳತೆಯ ಪೂರ್ಣ ಸುಸಜ್ಜಿತ ಪ್ರಯೋಗಾಲಯ ಕೊಠಡಿಗಳು ಇರತಕ್ಕದ್ದು.<br>7. ವಿದ್ಯುತ್, ನೀರು, ಕುಡಿಯುವ ನೀರು ಹಾಗೂ ವಿದ್ಯಾರ್ಥಿಗಳಿಗಾಗಿ ಸೈಕಲ್ ಸ್ಟ್ಯಾಂಡ್, ಪಾಠೋಪಕರಣ, ಪೀಠೋಪಕರಣಗಳನ್ನು ಮತ್ತು ವಿದ್ಯಾರ್ಥಿಗಳ ಸುರಕ್ಷತೆಗಾಗಿ ಸುರಕ್ಷತಾ ಕ್ರಮಗಳ |

| | | |
|---|---|---|
| | | ಸಾಧನಗಳನ್ನು ಒದಗಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.<br><br>ಇದಲ್ಲದೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 634 ಎಸ್‌ಹೆಚ್‌ಹೆಚ್ 2017 ದಿನಾಂಕ 24-01-2018 ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವ 03 ಕಿಲೋಮೀಟರ್ ಅಂತರದಲ್ಲಿ ಯಾವುದೇ ಹೊಸ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡುವಂತಿಲ್ಲ. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಇಡಿ 634 ಎಸ್‌ಹೆಚ್‌ಹೆಚ್ 2017(ಭಾಗ-1) ದಿನಾಂಕ: 05-11-2018ರನ್ವಯ ಮಹಾನಗರ/ ನಗರ/ ತಾಲ್ಲೂಕು/ ಹೋಬಳಿ ಕೇಂದ್ರ ಸ್ಥಾನಗಳ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಶೇಕಡ 50ರಷ್ಟು ವಿದ್ಯಾರ್ಥಿಗಳ ಸಂಖ್ಯೆಯು, ಅಸ್ತಿತ್ವದಲ್ಲಿರುವ ಪದವಿ ಪೂರ್ವ ಕಾಲೇಜುಗಳ ನಿಗದಿತ ವಿದ್ಯಾರ್ಥಿಗಳ ಸಂಖ್ಯೆಯನ್ನು ಮೀರಿದಲ್ಲಿ ಮೇಲಿನ ಷರತ್ತುಗಳನ್ನು ಸಡಿಲಗೊಳಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4) ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಸ್ಥಳ ಪರಿಶೀಲನೆಗೆ ತಪಾಸಣಾ ಸಮಿತಿಗೆ ಸೂಚನೆ ನೀಡಲಾಗುವುದಿಲ್ಲ. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಅಂತಹ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 331 ಎಸ್‌ಹೆಚ್‌ಹೆಚ್ 2018 ದಿನಾಂಕ: 11-09-2018ರನ್ವಯ ಕಾಲೇಜು ಕಟ್ಟಡದಲ್ಲಿ ಎಲ್ಲಾ ಸುರಕ್ಷಿತ ಕ್ರಮಗಳನ್ನು ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡೇ ಮಾನ್ಯತೆ ನೀಡುವುದು ಕಡ್ಡಾಯವಾಗಿರುತ್ತದೆ. |
| ಈ. | ಸರ್ಕಾರವು ಸದರಿ ಮಾನದಂಡಗಳಿಗೆ ವಿನಾಯ್ತಿ ನೀಡಿ ಕಳೆದ 04 ವರ್ಷಗಳಲ್ಲಿ ಮಂಜೂರು ಮಾಡಿದ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು (ವರ್ಷವಾರು, ಜಿಲ್ಲಾವಾರು, ಕಾಲೇಜುವಾರು ಮಾಹಿತಿ ನೀಡುವುದು) | ಮಾನದಂಡಗಳಿಗೆ ವಿನಾಯಿತಿ ನೀಡಿ ಯಾವುದೇ ಪದವಿ ಪೂರ್ವ ಕಾಲೇಜಿಗೆ ಮಂಜೂರಾತಿ ನೀಡಿರುವುದಿಲ್ಲ. |
| ಉ. | ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 04 ವರ್ಷಗಳಲ್ಲಿ ಮಂಜೂರು ಮಾಡಿದ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವ ಕಾಲೇಜುಗಳ ಒಟ್ಟು ಸಂಖ್ಯೆ:363<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ಒದಗಿಸಿದೆ. |
| ಊ. | ಸರ್ಕಾರ ವಿಧಿಸಿದ ಷರತ್ತುಗಳಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವ ಕಾಲೇಜುಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ | ಸರ್ಕಾರ ವಿಧಿಸಿದ ಷರತ್ತುಗಳಂತೆ ನಿಗದಿತ ಅವಧಿಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವ ಕಾಲೇಜುಗಳ ಆಡಳಿತ ಮಂಡಳಿಗಳ ವಿರುದ್ಧ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಯಿತು. |

| | | |
|---|---|---|
| | ನೀಡುವುದು) | ಏತನ್ಮಧ್ಯೆ ಚೌಗಲ ಪದವಿ ಪೂರ್ವ ಕಾಲೇಜು ಮತ್ತು ಚೇತನ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಗಳು ಮೂಲಭೂತ ಸೌಲಭ್ಯವನ್ನು ಒದಗಿಸಿಕೊಳ್ಳುವ ಕುರಿತಂತೆ ಇಲಾಖೆಯು ನೀಡಿದ ಕಾರಣ ಕೇಳುವ ನೋಟೀಸನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಇಂತಹ ಕಾಲೇಜುಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಇಲಾಖೆಗೆ ಸಾಧ್ಯವಾಗಿರುವುದಿಲ್ಲ.<br><br>ಮುಂದುವರೆದು, ನಿರ್ದಿಷ್ಟ ಕಾಲೇಜುಗಳ ಮೇಲೆ ಸ್ವೀಕೃತವಾದ ದೂರುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಎ.ಇ.ಸಿ.ಎಸ್ ಮ್ಯಾಗ್ನೋಲಿಯಾ ಮಾರುತಿ ಪದವಿ ಪೂರ್ವ ಕಾಲೇಜು, ಬೆಂಗಳೂರು ಮತ್ತು ಘೀಟ್‌ಜಿ ಪದವಿ ಪೂರ್ವ ಕಾಲೇಜು, ಬೆಂಗಳೂರು, ಈ ಕಾಲೇಜುಗಳ ವಿರುದ್ಧದ ದೂರಿನ ಹಿನ್ನೆಲೆಯಲ್ಲಿ ಕಾಲೇಜಿನ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ. |

**ಸಂಖ್ಯೆ: ಇಡಿ 344 ಡಿಜಿಡಬ್ಲ್ಯೂ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

## ಪ್ರಶ್ನೆ ಸಂಖ್ಯೆ: 552 ಅನುಬಂಧ - 1

| ಜಿಲ್ಲೆಯ ಹೆಸರು | ಕಾಲೇಜುಗಳ ಸಂಖ್ಯೆ |
|---|---|
| ಬೆಂಗಳೂರು ಉತ್ತರ | 350 |
| ಬೆಂಗಳೂರು ದಕ್ಷಿಣ | 438 |
| ಬೆಂಗಳೂರು ಗ್ರಾಮಾಂತರ | 62 |
| ರಾಮನಗರ | 53 |
| ಬಳ್ಳಾರಿ | 111 |
| ಚಿಕ್ಕೋಡಿ | 164 |
| ಬೆಳಗಾವಿ | 128 |
| ಬಾಗಲಕೋಟೆ | 104 |
| ವಿಜಯಪುರ | 209 |
| ಬೀದರ್ | 165 |
| ದಾವಣಗೆರೆ | 126 |
| ಚಿತ್ರದುರ್ಗ | 106 |
| ಚಿಕ್ಕಮಗಳೂರು | 54 |
| ಗದಗ | 78 |
| ಹಾವೇರಿ | 102 |
| ಧಾರವಾಡ | 157 |
| ಕಲಬುರಗಿ | 236 |
| ಯಾದಗಿರಿ | 67 |
| ಹಾಸನ | 98 |
| ಚಿಕ್ಕಬಳ್ಳಾಪುರ | 96 |
| ಕೋಲಾರ | 93 |
| ಚಾಮರಾಜನಗರ | 41 |
| ಮೈಸೂರು | 198 |
| ಮಂಡ್ಯ | 94 |
| ಉತ್ತರಕನ್ನಡ | 64 |
| ಕೊಪ್ಪಳ | 59 |
| ರಾಯಚೂರು | 132 |
| ದಕ್ಷಿಣ ಕನ್ನಡ | 164 |
| ಉಡುಪಿ | 69 |
| ಶಿವಮೊಗ್ಗ | 84 |
| ತುಮಕೂರು | 193 |
| ಕೊಡಗು | 57 |
| ಒಟ್ಟು | 4152 |

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

## ಪ್ರಶ್ನೆ 552ಕ್ಕೆ ಅನುಬಂಧ – ೨

| ಜಿಲ್ಲೆಯ ಹೆಸರು | ಜಿಲ್ಲೆ. | ತಾಲ್ಲೂಕು | ಹೋಬಳಿ | ಗ್ರಾಮ | ಒಟ್ಟು |
|---|---|---|---|---|---|
| ಬೆಂಗಳೂರು ಉತ್ತರ | 350 | | | | 350 |
| ಬೆಂಗಳೂರು ದಕ್ಷಿಣ | 438 | | | | 438 |
| ಬೆಂಗಳೂರು ಗ್ರಾಮಾಂತರ | -- | 30 | 10 | 22 | 62 |
| ರಾಮನಗರ | 12 | 27 | 2 | 12 | 53 |
| ಬಳ್ಳಾರಿ | 29 | 51 | -- | 31 | 111 |
| ಚಿಕ್ಕೋಡಿ | 13 | 36 | 52 | 63 | 164 |
| ಬೆಳಗಾವಿ | 46 | 44 | 6 | 32 | 128 |
| ಬಾಗಲಕೋಟೆ | 11 | 35 | 37 | 21 | 104 |
| ವಿಜಯಪುರ | 63 | 32 | 26 | 88 | 209 |
| ಬೀದರ್ | 50 | 58 | 11 | 46 | 165 |
| ದಾವಣಗೆರೆ | 58 | 24 | 12 | 32 | 126 |
| ಚಿತ್ರದುರ್ಗ | 32 | 23 | 12 | 39 | 106 |
| ಚಿಕ್ಕಮಗಳೂರು | 19 | 14 | 10 | 11 | 54 |
| ಗದಗ | 25 | 22 | 13 | 18 | 78 |
| ಹಾವೇರಿ | 18 | 38 | 14 | 32 | 102 |
| ಧಾರವಾಡ | 121 | 10 | 15 | 11 | 157 |
| ಕಲಬುರಗಿ | 125 | 78 | 12 | 21 | 236 |
| ಯಾದಗಿರಿ | 21 | 32 | 3 | 11 | 67 |
| ಹಾಸನ | 32 | 35 | 9 | 22 | 98 |
| ಚಿಕ್ಕಬಳ್ಳಾಪುರ | 19 | 34 | 9 | 34 | 96 |
| ಕೋಲಾರ | 26 | 36 | 5 | 26 | 93 |
| ಚಾಮರಾಜನಗರ | 8 | 15 | 11 | 7 | 41 |
| ಮೈಸೂರು | 120 | 40 | 16 | 22 | 198 |
| ಮಂಡ್ಯ | 26 | 28 | 8 | 32 | 94 |
| ಉತ್ತರಕನ್ನಡ | 10 | 31 | 8 | 15 | 64 |
| ಕೊಪ್ಪಳ | 11 | 31 | 6 | 11 | 59 |
| ರಾಯಚೂರು | 41 | 51 | 17 | 23 | 132 |
| ದಕ್ಷಿಣ ಕನ್ನಡ | 49 | 16 | 33 | 66 | 164 |
| ಉಡುಪಿ | 11 | 26 | 4 | 28 | 69 |
| ಶಿವಮೊಗ್ಗ | 26 | 37 | 3 | 18 | 84 |
| ತುಮಕೂರು | 51 | 63 | 28 | 51 | 193 |
| ಕೊಡಗು | 6 | 8 | 14 | 29 | 57 |
| ಒಟ್ಟು | 1867 | 1005 | 406 | 874 | 4152 |

ಜಂಟಿ ನಿರ್ದೇಶಕರು(ಮಾ&ಅ)
ಪದವಿ ಪೂರ್ವ ಶಿಕ್ಷಣ ಇಲಾಖೆ

Scanned by CamScanner

ಅನುಬಂಧ-3

| ಜಿಲ್ಲೆಯ ಹೆಸರು | ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳದಿರುವ ಕಾಲೇಜುಗಳ ಸಂಖ್ಯೆ |
|---|---|
| ಬೆಂಗಳೂರು ಉತ್ತರ | 36 |
| ಬೆಂಗಳೂರು ದಕ್ಷಿಣ | 52 |
| ಬೆಂಗಳೂರು ಗ್ರಾಮಾಂತರ | 08 |
| ರಾಮನಗರ | 04 |
| ಬಳ್ಳಾರಿ | 07 |
| ಚಿಕ್ಕೋಡಿ | 08 |
| ಬೆಳಗಾವಿ | 10 |
| ಬಾಗಲಕೋಟೆ | 09 |
| ವಿಜಯಪುರ | 20 |
| ಬೀದರ್ | 14 |
| ದಾವಣಗೆರೆ | 13 |
| ಚಿತ್ರದುರ್ಗ | 04 |
| ಚಿಕ್ಕಮಗಳೂರು | 02 |
| ಗದಗ | 02 |
| ಧಾರವಾಢ | 14 |
| ಹಾವೇರಿ | 08 |
| ಕಲಬುರಗಿ | 23 |
| ಯಾದಗಿರಿ | 13 |
| ಹಾಸನ | 11 |
| ಚಿಕ್ಕಬಳ್ಳಾಪುರ | 09 |
| ಕೋಲಾರ | 10 |
| ಚಾಮರಾಜನಗರ | 01 |
| ಮೈಸೂರು | 21 |
| ಮಂಡ್ಯ | 12 |
| ಉತ್ತರಕನ್ನಡ | 02 |
| ಕೊಪ್ಪಳ | 06 |
| ರಾಯಚೂರು | 16 |
| ದಕ್ಷಿಣ ಕನ್ನಡ | 10 |
| ಉಡುಪಿ | 01 |
| ಶಿವಮೊಗ್ಗ | 07 |
| ತುಮಕೂರು | 05 |
| ಕೊಡಗು | 05 |
| ಒಟ್ಟು | 363 |

ನಿರ್ದೇಶಕರು ಪರವಾಗಿ
ಪದವಿ ಪೂರ್ವ ಶಿಕ್ಷಣ ಇಲಾಖೆ